**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಡಗಲಿ .**

**ಸಿ.ಸಿ.ಸಂಖ್ಯೆಃ 1292/2023**

**ಪಿರ್ಯಾದುದಾರರು** : ರಾಜ್ಯದ ಪರವಾಗಿ ಕೂಡ್ಲಿಗಿ ಪೊಲೀಸ್ ಠಾಣೆ

ವಿರುದ್ಧ

**ಆರೋಪಿತರು** : 1) ಮೇಘರಾಜ ಬಿನ್ ಮೈಲಾರಪ್ಪ,
ವಯಸ್ಸುಃ 38 ವರ್ಷ, ವೃತ್ತಿಃ ವ್ಯವಸಾಯ.
ವಾಸಃ ಮಾನ್ಯರ ಮಸಲವಾಡ ಗ್ರಾಮ,
ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.

2) ಹೊನ್ನನಾಯಕನಹಳ್ಳಿ ಶ್ರೀಮತಿ ಶಾಂತವ್ವ
ಗಂಡ ಸೋಮಪ್ಪ,
ವಯಸ್ಸುಃ 40 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಮಾನ್ಯರ ಮಸಲವಾಡ ಗ್ರಾಮ,
ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.

3) ಶ್ರೀಮತಿ ತೋಟದ ಮಗಳವ್ವ ಗಂಡ ತಿಪ್ಪಣ್ಣ,
ವಯಸ್ಸುಃ 39 ವರ್ಷ, ವೃತ್ತಿಃ ಕೂಲಿ ಕೆಲಸ,
ವಾಸಃ ಮಾನ್ಯರ ಮಸಲವಾಡ ಗ್ರಾಮ,
ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.

4) ಹೊನ್ನನಾಯಕನಹಳ್ಳಿ ಚಿದಾನಂದ ಬಿನ್ ಗೋಣೆಪ್ಪ
ವಯಸ್ಸುಃ 35 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಕೆ.ಅಯ್ಯನಹಳ್ಳಿ ಗ್ರಾಮ,
ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.

5) ಶ್ರೀಮತಿ ಹೊನ್ನನಾಯಕನಹಳ್ಳಿ ಮರಿಯಮ್ಮ ಗಂಡ
ಗೋಣೆಪ್ಪ, ವಯಸ್ಸುಃ 50 ವರ್ಷ, ವೃತ್ತಿಃ ಕೂಲಿ.
ವಾಸಃ ಕೆ.ಅಯ್ಯನಹಳ್ಳಿ ಗ್ರಾಮ,

ಹಡಗಲಿ ತಾಲ್ಲೂಕು, ವಿಜಯನಗರ ಜಿಲ್ಲೆ.

6) ಶ್ರೀವುತಿ ಕವಿತಾ ಗಂಡ ಹನುವಂತಪ್ಪ,
ವಯಸ್ಸುಃ 32 ವರ್ಷ, ವೃತ್ತಿಃ ಕೂಲಿ .
ವಾಸಃ ಸಿಂಗಾಟಾಲೂರು ಗ್ರಾಮ,
ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.

7) ಶ್ರೀಮತಿ ಮಹಾದೇವಕ್ಕ ಗಂಡ ಬಸವರಾಜ,
ವಯಸ್ಸುಃ 36 ವರ್ಷ, ವೃತ್ತಿಃ ಕೂಲಿ .
ವಾಸಃ ಕೂಲಹಳ್ಳಿ ಗ್ರಾಮ,
ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

8) ಬಸವರಾಜ ಬಿನ್ ಮಲ್ಲಪ್ಪ,
ವಯಸ್ಸುಃ 40 ವರ್ಷ, ವೃತ್ತಿಃ ವ್ಯವಸಾಯ.
ವಾಸಃ ಕೂಲಹಳ್ಳಿ ಗ್ರಾಮ,
ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಭಾಗ್ಯಲಕ್ಷ್ಮಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ರಿಂದ 8 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 09-07-2023 ರಂದು ಸಂಜೆ 06-00 ಗಂಟೆಗೆ ಹಡಗಲಿ ಪೊಲೀಸ್ ಠಾಣಾ ಸರಹದ್ದಿನ ಕೊಂಬಳಿ ಗ್ರಾಮದಲ್ಲಿ ಚಾಸಾ 1 ರವರು ತನ್ನ ತಂದೆಯ ಮನೆಯಲ್ಲಿದ್ದಾಗ 1 ರಿಂದ 8 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಅಕ್ರಮ ಪ್ರವೇಶ ಮಾಡಿ ಚಾಸಾ-1 ರವರ ಜೊತೆ ವಿನಾಕಾರಣ ದೊಂಬಿಯನ್ನುಂಟು ಮಾಡಿದ್ದು ಆದ್ದರಿಂದ 1 ರಿಂದ 8 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.143 ಮತ್ತು 147 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 8 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಚಾಸಾ-1 ರವರ ಮನೆಗೆ ಹತ್ತಿರ ಅತಿಕ್ರಮ ಪ್ರವೇಶ ಮಾಡಿದ್ದರಿಂದ 1 ರಿಂದ 8 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.447 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಪಾದಿಸಲಾಗಿದೆ.

ಮೂರನೇಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಬಂದು, 1 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ವಿನಾಃ ಕಾರಣ ಜಗಳ ತೆಗೆದು ಹೊಡೆ-ಬಡೆ ಮಾಡಿ ಮಾನನಿಕ ಮತ್ತು ದೈಹಿಕ ಹಿಂಸೆ ನೀಡಿದ್ದು, ಆದ್ದರಿಂದ 1 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.498 ಎ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೇಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 8 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಬಂದು, ಆರೋಪಿತರಾದ ನೀವು ಚಾಸಾ-1 ರವರಿಗೆ ಲೇ ಬೋಸೂಡಿ ಸೂಳೆ ಅಂತಾ ಅವಾಚ್ಯಶಬ್ಧಗಳಿಂದ ಬೈದು ಉದ್ದೇಶಪೂರ್ವಕವಾಗಿ ಅವರಿಗೆ ಅವಮಾನ ಮಾಡಿ ಶಾಂತಿ ಭಂಗವುಂಟು ಮಾಡಿದ್ದು, ಆದ್ದರಿಂದ 1 ರಿಂದ 8 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ರ ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಐದನೇಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಬಂದು, ಆರೋಪಿತರಾದ ನೀವು ಕೈಗಳಿಂದ ಚಾಸಾ-1 ರಿಂದ 3 ರವರಿಗೆ ಕೈಗಳಿಂದ ಹೊಡೆದು ಗಾಯಗಳನ್ನು ಉಂಟುಮಾಡಿ ಮಾಡಿದ್ದು, ಆದ್ದರಿಂದ 1 ರಿಂದ 8 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಆರನೇಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 8 ನೇ ಆರೋಪಿತರಾದ ನೀವು ಅಕ್ರಮಕೂಟದ ಸದಸ್ಯರಾಗಿ ಗುಂಪುಕಟ್ಟಿಕೊಂಡು ಬಂದು ಚಾಸಾ- 1 ರಿಂದ 3 ರವರಿಗೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಪ್ರಾಣಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಮಾಡಿದ್ದರಿಂದ 1 ರಿಂದ 8 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 8 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ರಿಂದ 8 ನೇ ಆರೋಪಿತರಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಆರೋಪಿತರಾದ ನಿಮಗೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ರಿಂದ 8 ನೇ ಆರೋಪಿತರಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ದಿನಾಂಕ : 6.2.2024

ಹಡಗಲಿ . ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.
ನ್ಯಾಯಾಲಯ ಹಡಗಲಿ

1 ನೇ ಆರೋಪಿ ಸಹಿ : 6 ನೇ ಆರೋಪಿ ಸಹಿ :

2 ನೇ ಆರೋಪಿ ಸಹಿ : 7 ನೇ ಆರೋಪಿ ಸಹಿ :

3 ನೇ ಆರೋಪಿ ಸಹಿ : 8 ನೇ ಆರೋಪಿ ಸಹಿ :

4 ನೇ ಆರೋಪಿ ಸಹಿ :

5 ನೇ ಆರೋಪಿ ಸಹಿ :